# ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ
# ಕೆ.ಆರ್.ನಗರ

**ಓಎಸ್  17/2020**

ಪಿ  ಡಬ್ಲ್ಯೂ-1

**ದಿನಾಂಕ 20.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಎಮ್ ಸಿ ಎಸ್  ಪ್ರತಿ ವಾದಿ ಪರ ವಕೀಲರುಃ**

ನನಗೆ ದಾವಾ ಷೆಡ್ಯೂಲ್ ಸ್ವತ್ತಿನ ಬಗ್ಗೆ ಗೊತ್ತು, ಅದರ ಚೆಕ್ಕು ಬಂದಿ ನನಗೆ ಗೊತ್ತು. ದಾವಾ ಷೆಡ್ಯೂಲ್ ಸ್ವತ್ತು ಮೂಲತಹ ಪ್ರತಿವಾದಿ ರಾಮಕೃಷ್ಣೇಗೌಡರ ಸ್ವಯಾರ್ಜಿತ ಆಸ್ತಿ, ಅವರಿಗೆ ಇಬ್ಬರು ಮಕ್ಕಳು, ಒಂದು ಗಂಡು ಮತ್ತು ಒಂದು ಹೆಣ್ಣು. ಇಬ್ಬರು ಸಹ ಪ್ರಸ್ತುತ ಪ್ರಾಪ್ತ ವಯಸ್ಕರಾಗಿರುತ್ತಾರೆ. ನಿಪಿ-1 ಕ್ರಯ ಪತ್ರದಲ್ಲಿ ಪ್ರತಿವಾದಿ ಮಕ್ಕಳ ಬಗ್ಗೆ ತಿಳಿಸಿಲ್ಲ. ನಿಪಿ-1 ಆಗುವ ಕಾಲಕ್ಕೆ ಪ್ರತಿವಾದಿಯ ಮಗನಿಗೆ 27 ವರ್ಷ, ಮಗಳಿಗೆ 25 ವರ್ಷ ಆಗಿತ್ತು ಎಂದರೆ ಸರಿಯಲ್ಲ.  ಪ್ರತಿವಾದಿ ವ್ಯವಸಾಯ ಮಾಡುತ್ತಾರೆ, ಬೇರೆ ಏನು ಮಾಡುವುದಿಲ್ಲ. ಪ್ರತಿವಾದಿಯ ಮಗನೂ ಸಹ ವ್ಯವಸಾಯ ಮಾಡುತ್ತಾನೆ. ಅಪ್ಪ, ಮಗ ಇಬ್ಬರೂ ಒಂದೇ ಮನೆಯಲ್ಲಿ ವಾಸವಾಗಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ದಾವಾ ಸ್ವತ್ತು ಪ್ರತಿವಾದಿಯ ಸ್ವಾಯಾರ್ಜಿತ ಆಸ್ತಿ ಎಂದು ತಿಳಿಸಲು ಯಾವುದೇ ದಾಖಲೆ ನೀಡಿಲ್ಲ.

ದಾವಾ ಷೆಡ್ಯೂಲ್ ಸ್ವತ್ತು 25 ಗುಂಟೆ ಜಮೀನು ಗುಳುವಿನ ಅತ್ತಿಗುಪ್ಪೆ ಗ್ರಾಮದಲ್ಲಿದೆ. ಸದರಿ ಗುಳುವಿನ ಅತ್ತಿಗುಪ್ಪೆ ಗ್ರಾಮ ಹಾಸನ ಮೈಸೂರು ರಸ್ತೆಯಲ್ಲಿ ಇದೆ ಎಂದರೆ ಸರಿ. ಸದರಿ ರಸ್ತೆ ರಾಜ್ಯ ಹೆದ್ದಾರೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಜಮೀನುಗಳ ಬೆಲೆ ಹೆಚ್ಚಾಗಿದೆ ಎಂದರೆ ಸರಿ. ಪ್ರಸ್ತುತ ಸದರಿ ಗ್ರಾಮದಲ್ಲಿ ಪ್ರತಿ ಗುಂಟೆಗೆ 30 ರಿಂದ 40 ಸಾವಿರ ಬೆಲೆ ಬಾಳುತ್ತದೆ. ಪ್ರತಿವಾದಿಯ ಮಕ್ಕಳ ಸಹಿಯನ್ನು ಪಡೆಯಲು ಆ ಸಮಯದಲ್ಲಿ ಅವರು ಅಪ್ರಾಪ್ತರಾಗಿದ್ದರು.

ಪ್ರತಿವಾದಿಯ ಮಗಳು ಸುಮ ದಾವಾ ಷೆಡ್ಯೂಲ್ ಸ್ವತ್ತಿನ ಮೇಲೆ ದಾವಾ ಸಂಖ್ಯೆ 170/2023 ರಂತೆ ವಿಭಾಗಕ್ಕಾಗಿ ದಾವೆ ಹೂಡಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಸುಮರವರಿಗೆ 1/3 ನೇ ಭಾಗ ಪಾಲು ಇದೆ ಎಂದು ಆದೇಶ ಆಗಿದೆ ಎಂದರೆ ಸರಿಯಲ್ಲ. ನಂತರ ಸದರಿ ಸುಮ ಎಫ್ ಡಿ ಪಿ ಸಂಖ್ಯೆ 6/2024 ನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿಗಳ ಕುಟುಂಬದ ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ಎಲ್ಲಾ ಮಕ್ಕಳೂ ಈಗಲೂ ಸಹ ಒಟ್ಟು ಕುಟುಂಬದಲ್ಲಿ ಜೀವನ ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸದರಿ ದಾವಾ ಷೆಡ್ಯೂಲ್ ಸ್ವತ್ತಿನ ಮೇಲೆ ಅವಲಂಭಿಸಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸುಮರವರಿಗೆ ಈಗಾಗಲೇ ನ್ಯಾಯಾಲಯದಲ್ಲಿ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಭಾಗಾಂಶದ ಹಕ್ಕು ತೀರ್ಮಾನ ಆಗಿರುವುದರಿಂದ ನಾನು ಕೇಳಿರುವ ಪರಿಹಾರವನ್ನು ಪಡೆಯಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

ಸದರಿ ವ್ಯವಹಾರ ನಡೆದಾಗ ಅನೀಫ್ ಕುಮಾರ್, ಜಯರಾಮೇಗೌಡ ಮತ್ತು ಚಂದ್ರೇಗೌಡ ಸಹ ಸ್ಥಳದಲ್ಲಿ ಇದ್ದರು. ನಾನು ಹಣವನ್ನು ಮಿರ್ಲೆ ಉಪ ನೊಂದಣಾಧಿಕಾರಿಗಳ ಕಛೇರಿಯ ಬಳಿ ನೀಡಿರುತ್ತೇನೆ. ನಾನು ಪ್ರತಿವಾದಿಗೆ ಹಣವನ್ನು ಕೊಡುವಾಗಿ ಗ್ರಾಮಸ್ಥರು ಇರಲಿಲ್ಲ, ಸಾಕ್ಷಿದಾರರು ಮುಂದುವರೆದು ಸಾಕ್ಷಿದಾರರು ಇದ್ದರು ಎಂದು ನುಡಿಯುತ್ತಾರೆ. ನಾನು ನನ್ನ ಒಡವೆಗಳನ್ನು ನೊಂದಣಿಯ ಹಿಂದಿನ ದಿನ ಗಿರವಿ ಇಟ್ಟು ಹಣವನ್ನು ತಂದು ನೀಡಿರುತ್ತೇನೆ. ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಆಗುವುದಿಲ್ಲ. ಪ್ರತಿವಾದಿ ನನ್ನ ಬಳಿ ರೂ.25,000/- ಹಣವನ್ನು ಸಾಲವಾಗಿ ಪಡೆದುಕೊಂಡು ಸದರಿ ಸಾಲದ ಭದ್ರತೆಗಾಗಿ ನಾನು ನಿಪಿ-1 ನ್ನು ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸದರಿ ರೂ.25,000/- ಸಾಲವನ್ನು ಮಾತ್ರ ನೀಡಿ ರೂ.84,000/- ಹಣ ನೀಡಿದ್ದಾಗಿ ಸುಳ್ಳು ಪತ್ರವನ್ನು ಬರಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಬಡತನ ಮತ್ತು

ಅನಕ್ಷರತೆಯ ದುರುಪಯೋಗ ಪಡಿಸಿಕೊಂಡು ಸುಳ್ಳು ಪತ್ರವನ್ನು ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತು ಪ್ರಸ್ತುತ 7 ರಿಂದ 8 ಲಕ್ಷ ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ. ನಾನು ಅಕ್ರಮವಾಗಿ ಬಡ್ಡಿ ವ್ಯವಹಾರನ್ನು ಮಾಡುತ್ತೇನೆ ಎಂದರೆ ಸರಿಯಲ್ಲ. ಸದರಿ ಬಡ್ಡಿಯ ವ್ಯವಹಾರಕ್ಕೆ ಪತ್ರವನ್ನು ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿ ಮಗಳು ಪಡೆದಿರುವ ಆದೇಶವನ್ನು ಪ್ರಶ್ನೆ ಮಾಡುತ್ತೇನೆ. ಪ್ರತಿವಾದಿಯ ಮಕ್ಕಳ ಸಹಿಯನ್ನು ನಿಪಿ-1ಕ್ಕೆ ಪಡೆದುಕೊಳ್ಳದ ಕಾರಣ ನಾನು ಕೋರಿರುವ ಪರಿಹಾರನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಮಕ್ಕಳನ್ನು ವಂಚಿಸಿ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ರೂ.25,000/- ಹಣಕ್ಕೆ ಬಡ್ಡಿಯನ್ನು ಪಡೆದುಕೊಳ್ಳುತ್ತಿದ್ದು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**

ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ